(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:250/2014-15 ದಿನಾಂಕ:19.07.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

*****

**ವಾದಿಗಳು: ಶ್ರೀ/ ಶ್ರೀಮತಿ**

1] ಕೆ.ವೆಂಕಟೇಶ ತಂದೆ ದಿ॥ ಗೋವಿಂದಪ್ಪ, ವಾಸ: ಕೂಡ್ಲಿಗಿ ಗ್ರಾಮ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

**[ ಶ್ರೀ ಹೆಚ್.ಬಿಡ್ಡಪ್ಪ, ವಕೀಲರು, ಹೊಸಪೇಟೆ ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಕೆ.ಯಂಕಮ್ಮ ತಾಯಿ ಶಾರದ ಇವರ ಪೋತಿ ವಾರಸುದಾರರು

1ಎ] ಕೆ.ಸತ್ಯನಾರಾಯಣ ಮೂರ್ತಿ, ವಾಸ:15 ನೇ ವಾರ್ಡ್, ಕಾಲ್‌ಚಟ್ಟಿ ಲೇನ್, ಕೂಡ್ಲಿಗಿ, ಕೂಡ್ಲಿಗಿತಾಲೂಕು, ಬಳ್ಳಾರಿ ಜಿಲ್ಲೆ.

2] ಕೆ.ಪದ್ಮಾವತಿ ತಾಯಿ ಕಾಲ್‌ಚಟ್ಟಿ ಅಂಬವ್ವ ಇವರ ಪೋತಿ ವಾರಸುದಾರರು

2ಎ] ಕೆ.ಸೀನಪ್ಪ ಅಲಿಯಾಸ್ ಶ್ರೀನಿವಾಸ ತಾಯಿ ಕೆ.ಅಂಬವ್ವ ಅಲಿಯಾಸ್ ಅಂಬಮ್ಮ ವಾಸ:12 ನೇ ವಾರ್ಡ್, ಮಸೀಜ್ ಹತ್ತಿರ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

**[ಪ್ರತಿವಾದಿ-1ಎ ಮತ್ತು 2ಎ ಪರ ವಕೀಲರು, ಶ್ರೀ ಟಿ.ಮಲ್ಲಿಕಾರ್ಜುನ ಸ್ವಾಮಿ, ವಕೀಲರು, ಹೊಸಪೇಟೆ]**

3] ತಹಶೀಲ್ದಾರರು, ಕೂಡ್ಲಿಗಿ.

Sub Divisional Magistrate, Hospet

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಕೂಡ್ಲಿಗಿ | ಕೂಡ್ಲಿಗಿ | ಕೂಡ್ಲಿಗಿ | 355 | 02 ಎಕರೆ 83 ಸೆಂಟ್ಸ್ |
| | | | 335 | 03 ಎಕರೆ 15 ಸೆಂಟ್ಸ್ |

**ಪೀಠಿಕೆ:-**

ಕೂಡ್ಲಿಗಿ ತಾಲೂಕು ಕೂಡ್ಲಿಗಿ ಹೋಬಳಿ ಕೂಡ್ಲಿಗಿ ಗ್ರಾಮದ ಸ.ನಂ.355 ಪೈಕಿ ವಿಸ್ತೀರ್ಣ:02 ಎಕರೆ 83 ಸೆಂಟ್ಸ್; ಸ.ನಂ.335 ಪೈಕಿ ವಿಸ್ತೀರ್ಣ:03 ಎಕರೆ 15 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಕೂಡ್ಲಿಗಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಸಂ/ಕಂ/ಪಹಣಿ/ವಿವಾದ/134/2013-14 ದಿನಾಂಕ:15.10.2014 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ಮತ್ತು ಸದರಿ ಕಾಯ್ದೆಯ ಕಲಂ 55 ರಡಿಯಲ್ಲಿ ಪ್ರಶ್ನಿತ ಆದೇಶಕ್ಕೆ ಪ್ರಕರಣ ಇತ್ಯರ್ಥವಾಗುವವರೆಗೆ ತಡೆಯಾಜ್ಞೆಯನ್ನು ಕೋರಿ ಮನವಿಯನ್ನು ವಾದಿಪರ ವಕೀಲರು ದಿನಾಂಕ:28.01.2015 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ಸದರಿ ಪ್ರಶ್ನಿತ ಆದೇಶಕ್ಕೆ ಮುಂದಿನ ವಿಚಾರಣೆ ದಿನಾಂಕದವರೆಗೆ ಮಾತ್ರ ತಡೆಯಾಜ್ಞೆಯನ್ನು ನೀಡಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:10.03.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ವ್ಯಾಜ್ಯದ ಜಮೀನುಗಳು ಮೂಲತ: ಜೆ.ಚೌಡಮ್ಮ ಇವರಿಗೆ ಸಂಬಂಧಿಸಿದ್ದು, ಇವರಿಗೆ ಶ್ರೀಮತಿ ಕೆ.ಕೊತ್ಲಮ್ಮ ಹಾಗೂ ಶ್ರೀಮತಿ ಭೀಮವ್ವ ಎಂಬ ಇಬ್ಬರು ಹೆಣ್ಣುಮಕ್ಕಳು ಹಾಗೂ ಕಾಳಶೆಟ್ಟಿ ಓಬಯ್ಯ ಎಂಬ ಒಬ್ಬ ಗಂಡು ಮಗನಿದ್ದು, ಸದರಿ ಓಬಯ್ಯ ಇವರು ಮಾನ್ಯ ಸಿವಿಲ್ ಜಡ್ಜ್, ಬಳ್ಳಾರಿ ಇವರಲ್ಲಿ ಓ.ಎಸ್.ನಂ.01/1961 ರ ಮೂಲಕ ಕೆ.ಕೊತ್ಲವ್ವ ಇವರ ವಾರಸುದಾರರಿಗೆ ಪಾಲು ವಿಭಾಗ ಹಾಗೂ ಸ್ವಾಧಿನತೆಗನುಗುಣವಾಗಿ ಹಕ್ಕು ದಾಖಲಿಸಲು ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವು ರಾಜಿ ಪ್ರಕಾರ 13.03.1961 ರಂದು ಮುಕ್ತಾಯವಾಗಿರುತ್ತದೆಂದು ಆ ಪ್ರಕಾರವಾಗಿ ಕೆ.ಈರಪ್ಪ, ಕೆ.ಭರಮಪ್ಪ, ಮತ್ತು ಇವರ ಮಗ ಗುರುಬಸಪ್ಪ ಇವರ ಪಾಲಿಗೆ ಬಂದಿರುವುದಾಗಿ ವಾದಿಯು ಕೆ.ಈರಪ್ಪ ಇವರ ಮಗನಾಗಿರುವುದಾಗಿ, ಅವರ ಮರಣಾನಂತರ ವಾದಿಯೇ ಸದರಿ ಜಮೀನಿನ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಸದರಿ ವ್ಯಾಜ್ಯದ ಜಮೀನಿನಲ್ಲಿ ಪ್ರತಿವಾದಿಗಳಿಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲವೆಂದು, ಪ್ರಶ್ನಿತ ಆದೇಶದಿಂದ ಬಾಧಿತಗೊಂಡ ವಾದಿಯು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ, ಹಾಗೂ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲು ಕೋರಿ ಮನವಿ ಸಲ್ಲಿಸಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

2. ಸದರಿ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ಈಗಾಗಲೇ ತಹಶೀಲ್ದಾರರು, ಕೂಡ್ಲಿಗಿ ಇವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:1]ಸಂ/ಕಂ/ಪಹಣಿ/ಹ:ಬ/02/08-09 ದಿನಾಂಕ:05.02.2009ರ ಪ್ರಕಾರ ಹಾಗೂ 2] ಸಂ/ಕಂ/ಪಹಣಿ/ವಿವಾದ/134/2013-14 ದಿನಾಂಕ:15.10.2014 ರ ಪ್ರಕಾರ ಪ್ರತಿವಾದಿಗಳ ಪರವಾಗಿ ಆದೇಶವಾಗಿರುವುದು ಕಂಡು ಬಂದಿರುತ್ತದೆ.

3. ಸದರಿ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆಯಲ್ಲಿ ಪ್ರಕರಣ ಸಂಖ್ಯೆ: ಬಿ.ವಿಲೇ.ಸಂ.ಕಂ.ಪಹಣಿ.ಅಪೀಲು/79/08-09 ದಿನಾಂಕ:25.09.2009 ರಲ್ಲಿ ತಹಶೀಲ್ದಾರರು, ಕೂಡ್ಲಿಗಿ ಇವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: 1]ಸಂ/ಕಂ/ಪಹಣಿ/ಹ.ಬ/02/08-09 ದಿನಾಂಕ:05.02.2009 ರ ಆದೇಶವನ್ನು ಎತ್ತಿಹಿಡಿದು ಆದೇಶಿಸಿದ್ದು, ಪೋತಿ ಅಂಬವ್ವನ ವಾರಸ ಕುರಿತು ತಕರಾರು ಇದ್ದಲ್ಲಿ ವಾದಿಗಳು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಬಿತು ಪಡಿಸಿಕೊಂಡು ಪಡೆಯಬೇಕಾಗುತ್ತದೆ ಎಂದು ಆದೇಶಿಸಿದ್ದು, ಪ್ರತಿವಾದಿಗಳ ಪರವಾಗಿ ಆದೇಶವಾಗಿರುವುದು ಕಂಡು ಬಂದಿರುತ್ತದೆ.

4. **ಪ್ರತಿವಾದಿಪರ ವಕೀಲರು** ಅಪೀಲುದಾರರ ವಾದವನ್ನು ತಳ್ಳಿಹಾಕುತ್ತಾ, ಅಪೀಲುದಾರರು ಸುಳ್ಳು ವಂಶವೃಕ್ಷ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾಳಚೆಟ್ಟಿ ಚೌಡಮ್ಮ ಇವರಿಗೆ ಶ್ರೀಮತಿ ಕೆ.ಕೊತ್ಲಮ್ಮ ಹಾಗೂ ಶ್ರೀಮತಿ ಕೆ.ಭೀಮವ್ವ ಎಂಬ ಇಬ್ಬರು ಹೆಣ್ಣುಮಕ್ಕಳು ಕೆ.ಓಬಯ್ಯ ಎಂಬ ಒಬ್ಬ ಗಂಡು ಮಗನಿದ್ದು, ಸದರಿ ಓಬಯ್ಯ ಇವರು ಮಾನ್ಯ ಸಿವಿಲ್ ಜಡ್ಜ್, ಬಳ್ಳಾರಿ ಇವರಲ್ಲಿ ಓ.ಎಸ್.ನಂ.01/1961 ರ ಮೂಲಕ ಪಾಲು ವಿಭಾಗದ ಪ್ರಕಾರ ಹಕ್ಕು ದಾಖಲಿಸಲು ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವು ರಾಜಿ ಪ್ರಕಾರ 13.03.1961 ರಂದು ಮುಕ್ತಾಯವಾಗಿರುತ್ತದೆ. ಆದರೆ ಆ ಪ್ರಕಾರವಾಗಿ ಸ.ನಂ.355 ವಿಸ್ತೀರ್ಣ:01 ಎಕರೆ 93 ಸೆಂಟ್ಸ್ ಮತ್ತು ಸ.ನಂ.335 ವಿಸ್ತೀರ್ಣ:01 ಎಕರೆ 57 ಸೆಂಟ್ಸ್ ಕೆ.ಈರಪ್ಪ, ಕೆ.ಭರಮಪ್ಪ, ಮತ್ತು ಇವರ ಮಗ

ಮತ್ತು ಸ.ನಂ.335 ವಿಸ್ತೀರ್ಣ:01 ಎಕರೆ 57 ಸೆಂಟ್ಸ್ ಕೆ.ಈರಪ್ಪ, ಕೆ.ಭರಮಪ್ಪ, ಮತ್ತು ಇವರ ಮಗ ಗುರುಬಸಪ್ಪ ಇವರ ಪಾಲಿಗೆ ಬಂದಿರುವುದಿಲ್ಲ ಆದರೆ ಸದರಿ ರಾಜಿ ಪ್ರಕಾರ ಸದರಿ ಜಮೀನುಗಳು ಸ.ನಂ.355 ವಿಸ್ತೀರ್ಣ:01 ಎಕರೆ 96 ಸೆಂಟ್ಸ್ ಮತ್ತು ಸ.ನಂ.335 ವಿಸ್ತೀರ್ಣ:01 ಎಕರೆ 58 ಸೆಂಟ್ಸ್ ಕಾಳಚಟ್ಟಿ ಓಬಯ್ಯ ಇವರ ಪಾಲಿಗೆ ಬಂದಿರುವುದಾಗಿ, ಸ.ನಂ.355/ಎ ವಿಸ್ತೀರ್ಣ:01 ಎಕರೆ 57 ಸೆಂಟ್ಸ್ ಜಮೀನು ಕೆ.ಭರ್ಮಪ್ಪ @ ಕುಂಟಪ್ಪ, ಅಂಬವ್ವ ಮತ್ತು ವೀರಣ್ಣ ಇವರ ಪಾಲಿಗೆ ಬಂದಿರುವುದಾಗಿ, ತದನಂತರದಲ್ಲಿ, ಕೆ.ಭರ್ಮಪ್ಪ @ ಕುಂಟಪ್ಪ, ಅಂಬವ್ವ ಮತ್ತು ವೀರಣ್ಣ ಇವರುಗಳು ಸೇರಿಕೊಂಡು ಕಾಳಚಟ್ಟಿ ಭೀಮವ್ವ ಮತ್ತು ಕಾಳಚಟ್ಟಿ ಕೊತ್ಲವ್ವ ಇವರುಗಳ ಜಮೀನುಗಳ ಜೊತೆಗೆ ಮೌಖಿಕವಾಗಿ 1967 ರಲ್ಲಿ ಪಾಲು ವಿಭಾಗ ಮಾಡಿಕೊಂಡಿರುವುದಾಗಿ ಆ ಪ್ರಕಾರವಾಗಿ ಸದರಿ ಸ.ನಂ.355/ಎ ವಿಸ್ತೀರ್ಣ:01 ಎಕರೆ 97 ಸೆಂಟ್ಸ್; ಮತ್ತು ಸ.ನಂ.335/ಎ ವಿಸ್ತೀರ್ಣ:01 ಎಕರೆ 57 ಸೆಂಟ್ಸ್ ಕಾಳಚಟ್ಟಿ ಅಂಬವ್ವ ಇವರ ಪಾಲಿಗೆ ಬಂದಿರುವುದಾಗಿ, ಆ ಪ್ರಕಾರವಾಗಿ 1968-69 ರಿಂದ ಇವರ ಹೆಸರಿಗೆ ಪಹಣಿ ದಾಖಲೆಯಿರುವುದಾಗಿ, ಅವರೇ ಸದರಿ ಜಮೀನಿನ ಸ್ವಾಧೀನಾನುಭವವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ.

5. ಮುಂದುವರೆದು, ಕೆ.ಪದ್ಮಾವತಿ, ಕೆ.ಸೀನಪ್ಪ ಇವರುಗಳು ಅಂಬವ್ವ ಇವರ ಮಕ್ಕಳಾಗಿದ್ದು, ಅಂಬವ್ವ ಇವರ ಮರಣಾನಂತರ ಪೋತಿ ವಾರಸ ಪ್ರಕಾರ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಲಾಗಿ ವಾದಿಗಳು ಸದರಿ ಹಕ್ಕು ಬದಲಾವಣೆಗೆ ತಕರಾರು ಸಲ್ಲಿಸಿದ್ದು, ತಹಶೀಲ್ದಾರರು, ಕೂಡ್ಲಿಗಿ ಇವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: ಸಂ/ಕಂ/ಪಹಣಿ/ಹ.ಬ/02/08-09 ದಿನಾಂಕ:05.02.2009ರ ಪ್ರಕಾರ ಪ್ರತಿವಾದಿಗಳ ಪರವಾಗಿ ಆದೇಶವಾಗಿರುತ್ತದೆ. ಹಾಗೂ ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆಯಲ್ಲಿ ಪ್ರಕರಣ ಸಂಖ್ಯೆ: ಬಿ.ವಿಲೇ.ಸಂ.ಕಂ.ಪಹಣಿ.ಅಪೀಲು/79/08-09 ದಿನಾಂಕ:25.09.2009ರಲ್ಲಿ ತಹಶೀಲ್ದಾರರು, ಕೂಡ್ಲಿಗಿ ಇವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: ಸಂ/ಕಂ/ಪಹಣಿ/ಹ.ಬ/02/08-09 ದಿನಾಂಕ:05.02.2009 ರ ಆದೇಶವನ್ನು ಎತ್ತಿಹಿಡಿದು ಅಪೀಲನ್ನು ವಜಾಗೊಳಿಸಲಾಗಿರುತ್ತದೆ.

6. ಸದರಿ ವ್ಯಾಜ್ಯದ ಜಮೀನುಗಳನ್ನು ದಿನಾಂಕ:15.11.2011 ರ ಪಾಲು ವಿಭಾಗದ ಒಪ್ಪಿಗೆ ಪತ್ರದ ಪ್ರಕಾರ ಹಾಗೂ 11 ಇ ನಕ್ಷೆ ಪ್ರಕಾರ ಹಕ್ಕು ಬದಲಾವಣೆ ಮಾಡಲು ಸಂ/ಕಂ/ಪಹಣಿ/ವಿವಾದ/134/2013-14 ದಿನಾಂಕ:15.10.2014 ರ ಪ್ರಕಾರ ಪ್ರತಿವಾದಿಗಳ ಪರವಾಗಿ ಆದೇಶವಾಗಿರುವುದು ಕಂಡು ಬಂದಿರುತ್ತದೆ.

7. ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಮಾನ್ಯ ಸಿನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಕೂಡ್ಲಿಗಿ ಯಲ್ಲಿ ಓ.ಎಸ್.ನಂ.:34/2008 ರಡಿ ಪ್ರಕರಣ ದಾಖಲಿಸಿದ್ದು, ದಿನಾಂಕ:19.02.2016 ರಂದು ಪ್ರಿಲಿಮಿನರಿ ಡಿಕ್ರಿ ಆಗಿರುವುದು ಕಂಡುಬಂದಿರುತ್ತದೆ.

ಆದುದರಿಂದ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಕೂಡ್ಲಿಗಿ ತಾಲೂಕು ಕೂಡ್ಲಿಗಿ ಹೋಬಳಿ

ಕೂಡ್ಲಿಗಿ ಗ್ರಾಮದ ಸ.ನಂ.355 ಪೈಕಿ ವಿಸ್ತೀರ್ಣ:02 ಎಕರೆ 83 ಸೆಂಟ್ಸ್; ಸ.ನಂ.335 ಪೈಕಿ ವಿಸ್ತೀರ್ಣ:03 ಎಕರೆ 15 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಮಾನ್ಯ ಸಿನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಕೂಡ್ಲಿಗಿ ಇವರಲ್ಲಿ ಓ.ಎಸ್.ನಂ.:34/2008 ರಡಿ ಪ್ರಕರಣ ದಾಖಲಿಸಿದ್ದು, ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಸಿನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಕೂಡ್ಲಿಗಿ ಇವರ ಆದೇಶಕ್ಕೆ ಒಳಪಟ್ಟು ಎತ್ತಿಹಿಡಿದು ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಕೂಡ್ಲಿಗಿ ತಾಲೂಕು ಕೂಡ್ಲಿಗಿ ಹೋಬಳಿ ಕೂಡ್ಲಿಗಿ ಗ್ರಾಮದ ಸ.ನಂ.355 ಪೈಕಿ ವಿಸ್ತೀರ್ಣ:02 ಎಕರೆ 83 ಸೆಂಟ್ಸ್; ಸ.ನಂ.335 ಪೈಕಿ ವಿಸ್ತೀರ್ಣ:03 ಎಕರೆ 15 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ, ಮಾನ್ಯ ಸಿನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಕೂಡ್ಲಿಗಿ ಇವರಲ್ಲಿ ಓ.ಎಸ್.ನಂ.:34/2008 ರಡಿ ಪ್ರಕರಣ ದಾಖಲಿಸಿದ್ದು, ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಸಿನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಕೂಡ್ಲಿಗಿ ಇವರ ಆದೇಶಕ್ಕೆ ಒಳಪಟ್ಟು ಎತ್ತಿಹಿಡಿದು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:19.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
ಸಹಾಯಕ ಆಯುಕ್ತರು,
ಹೊಸಪೇಟೆ.

Sub Divisional Magistrate, Hospet

ವಾದಿ : ಪ್ರತಿವಾದಿಗಳಿಗೆ

__ಪ್ರತಿಯನ್ನು__:- ತಹಶೀಲ್ದಾರರು, ಕೂಡ್ಲಿಗಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ರವಾನಿಸಲಾಗಿದೆ: 03/8/16
ಕ್ರಮಾಂಕ
ದಿನಾಂಕ